# MYDLIS ನಲ್ಲಿ ನನ್ನ ನೆನಪುಗಳು



P. S. MANJUNATHA (2003-05 Batch student)
LIBRARIAN
B.N.M. INSTITUTE OF TECHNOLOGY
BANGALORE

MYDLIS ನಲ್ಲಿ ಅಂತಿಮ ಸ್ನಾತಕೋತ್ತರ ಪದವಿಯ ಕೊನೆಯ ಕ್ಷಣಗಳು ಕೆಲವೇ ದಿನಗಳಲ್ಲಿ ಕಾಲೇಜು ಜೀವನ ಮುಗಿದು ಬಿಡುವುದರಲ್ಲಿತ್ತು. ಭಾರವಾದ ಮನಸ್ಸಿನಿಂದ DLISಗೆ ಗುಡ್‌ಬೈ ಹೇಳೋದು ಅನಿವಾರ್ಯವಾಗಿತ್ತು. Juniors ನಮ್ಮ ಮುಂದಿನ ಭವಿಷ್ಯಕ್ಕೆ ಶುಭ ಹಾರೈಸುವ ಆ ಸಂದರ್ಭ ಬಂದೇ ಬಿಟ್ಟಿತು. ಇವೆಲ್ಲವೂ ಭಾವನಾತ್ಮಕವಾಗಿ ಮನಸ್ಸಿನಲ್ಲಿ ಉಳಿದುಕೊಂಡ ಎಂದೂ ಅಳಿಸದ ಶಾಶ್ವತ ನೆನಪುಗಳು.

* * * * * * * *

MYDLIS ನಲ್ಲಿ ನನ್ನ 2003–05ನೇ ಸಾಲಿನ ಎರಡು ವರ್ಷಗಳ ವಿದ್ಯಾರ್ಥಿ ಜೀವನದ ಅನುಭವಗಳನ್ನು ಸಿಂಹಾವಲೋಕನ ಮಾಡಿದಾಗ, ಮೊದಲ ವರ್ಷ ಎಲ್ಲರೂ ಅಪರಿಚಿತರೇ. ಡಿಗ್ರಿ ಮುಗಿಸಿ ಬಂದ ಯುವ ಮನಗಳಿಗೆ ಮಾನಸ ಗಂಗೋತ್ರಿ ಅಂದರೆ ಒಂಥರಾ ಮೋಜು. ಯುವ ಹಕ್ಕಿಗಳಾಗಿ ಹಾರಾಡುವ ಸಮಯದಲ್ಲಿ, ಜೀವನದಲ್ಲಿ ಯಶಸ್ಸು ಸಾಧಿಸಬೇಕು ಎಂಬ ಕಲ್ಪನೆಯಿಂದ 2003 ರಲ್ಲಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನದ ವಿಭಾಗದ ಮೆಟ್ಟಿಲು ಏರಿದ ಕ್ಷಣಗಳು. ಅಬ್ಬಾ! ಎಷ್ಟು ದೊಡ್ಡ ಕ್ಯಾಂಪಸ್. ಮೊದಲ ವರ್ಷ ಎಲ್ಲರಿಗೂ ಒಂದೇ ತರಹದ ಮನಸ್ಸು, ಒಂದೇ ತರಹದ ಭಾವನೆ. ಹೊಸ ಕೋರ್ಸ್, ಹೊಸ ವಿಷಯಗಳು, ಹೊಸ ಪ್ರಾಧ್ಯಾಪಕರು. ಒಟ್ಟಿನಲ್ಲಿ ಎಲ್ಲವೂ ಹೊಸದು. ಮೊದಲ ವರ್ಷ ಏನೋ ಹುರುಪು. ಸ್ವಲ್ಪ ಖುಷಿ, ಭರವಸೆ, ಉತ್ಸಾಹ, ಧೈರ್ಯ. ಹೊಸ ಸ್ನೇಹಿತರ ಪರಿಚಯ. ಜೊತೆಗೆ ಸೀನಿಯರ್ಸ್! ಇವರು ಮೊದಲ ವರ್ಷದ ವಿದ್ಯಾರ್ಥಿಗಳಾದ

ನಮಗೆ ನಾಯಕ–ನಾಯಕಿಯರು ಮತ್ತು ಮಾರ್ಗದರ್ಶಕರು. ಕಿರಿಯ ವಿದ್ಯಾರ್ಥಿಗಳಾದ ನಮಗೆ ಇವರನ್ನು ಎದುರಿಸುವ ಧೈರ್ಯವಿರಲಿಲ್ಲ. ಸುಮ್ಮನೆ ಇರಲು ಮನಸ್ಸಿಲ್ಲ. ಸೀನಿಯರ್ಸ್ ಹೇಳಿದ ರೀತಿಯಲ್ಲೆ ನಡೆಯಬೇಕು. ಜೊತೆಗೆ Seniors ಮತ್ತು Juniors ನಾವೆಲ್ಲಾ ಒಂದೇ ಎಂಬ ಭಾವನೆ ಬರುವಷ್ಟರಲ್ಲಿ, ಮೊದಲ ವರ್ಷ ಒಂದೊಂದು ವಿಷಯ ಚೂರು ಚೂರಾಗಿ ಓದಿ ಸುಧಾರಿಸಿಕೊಳ್ಳುವುದರಲ್ಲಿ ಪರೀಕ್ಷೆಯೇ ಬಂತು. ಅಷ್ಟರಲ್ಲಿ ಮೊದಲ ವರ್ಷ ಮುಗಿದಿತ್ತು.

ನೋಡು ನೋಡುತ್ತಿದ್ದ ಹಾಗೆ ಎರಡನೇ ವರ್ಷ ಬಂತು. ಈಗ ನಾವು Seniors ಆದೆವು ಎಂಬ ಗತ್ತು ಬೇರೆ ಬಂತು. ಅಷ್ಟರಲ್ಲಿ ಕಿರಿಯ ವಿದ್ಯಾರ್ಥಿಗಳ ಸೈನ್ಯ ಬಂದಿತ್ತು. ಅವರಿಗೆ ನಾವು ರೋಲ್ ಮಾಡೆಲ್ ಆಗಿದ್ದೆವು.

ವಾರಕ್ಕೆ ಆರು ದಿನ ಕ್ಲಾಸ್. ಪ್ರಾಧ್ಯಾಪಕರು ಬರುವ ಮೊದಲೇ ಕ್ಲಾಸ್‌ನಲ್ಲಿ ಕುಳಿತುಕೊಳ್ಳುವುದು. DDC & UDC ಪ್ರಾಕ್ಟಿಕಲ್ ಕ್ಲಾಸ್, ನಂತರ ಸಂಜೆ Round-Canteen ನಲ್ಲಿ ಸ್ನೇಹಿತರ ಜೊತೆ ಹರಟೆ, ನಂತರ ಜಾಲಿಯಾಗಿರೋಣವೆಂದರೆ ಬಿಡದ ಟೆಸ್ಟ್‌ಗಳು, ಅಸೈನ್‌ಮೆಂಟ್‌ಗಳು, Presentation ಗಳು ಮತ್ತು Final Project. ನೋಡು ನೋಡುತ್ತಿದ್ದ ಹಾಗೆ ಕೊನೆಯ ವರ್ಷ ಮುಗಿದೆ ಹೋಗಿತ್ತು. ಎರಡು ವರ್ಷ ಕಳೆದದ್ದೇ ಗೊತ್ತಾಗಲಿಲ್ಲ.

DLIS ನಲ್ಲಿ ಎರಡು ವರ್ಷಗಳು ನೆನಪು ಮಾತ್ರ ಅಂತ ಯೋಚಿಸಲು ಬೇಜಾರಾಗುತ್ತದೆ. ನೀನು ಆ ಕೆಲಸವನ್ನು ಮಾಡೇ ಮಾಡುತ್ತೀಯಾ ಅಂತ ಬೆನ್ನು ತಟ್ಟಿ ನನ್ನನ್ನೂ ಪ್ರೋತ್ಸಾಹಿಸಿದ ನನ್ನ ಗೆಳೆಯರು, ಮುಂದೆ ಗುರಿ ಇರಬೇಕು ಹಿಂದೆ ಗುರು ಇರಬೇಕು ಎಂಬಂತೆ ನನಗೆ ಸಿಕ್ಕ ಗುರುವೃಂದವನ್ನು ಮರೆಯಲಾಗದು. King ಆಗ ಬಯಸದೆ King Maker ಗಳಾಗಿ ಎಲೆ ಮರೆಯ ಕಾಯಿಯಂತೆ ನಮ್ಮ ಪ್ರತಿಭೆಯನ್ನೂ ಗುರುತಿಸಿ, ನಮ್ಮನ್ನು ಸಮಾಜದಲ್ಲಿ ಪರಿಪೂರ್ಣ ಮನುಷ್ಯರನ್ನಾಗಿಸಿದ ನಮ್ಮ ಗುರುಗಳು ನಿಜಕ್ಕೂ Great.

MYDLIS ಈಗ 50 ವರ್ಷಗಳ ಸುವರ್ಣ ಮಹೋತ್ಸವವನ್ನು ಆಚರಿಸಿಕೊಳ್ಳುತ್ತಿದೆ. 2003–2005 ನೇ ವಿದ್ಯಾರ್ಥಿಗಳ ಪರವಾಗಿ ಶುಭಾಷಯವನ್ನು ಕೋರುತ್ತೇನೆ.